ಓ.ಎಸ್ ನಂ.54/2023 ಪಿ.ಡಬ್ಲ್ಯೂ-1 (ಕುಮಾರ ಎಸ್)

ಸಾಕ್ಷಿಯನ್ನು ದಿನಾಂಕಃ 04.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿ ವಾದಿ 2 ರಿಂದ 4 ಪರ ವಕೀಲರಾದ ಶ್ರೀ ಎಸ್ ಎಸ್ ಕೆ ರವರ ಪರವಾಗಿ ಶ್ರೀ ಕೆ ಕೆ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಜೊಲ್ಲೆಯ್ಯನ ಗುಳ್ಳು ಗ್ರಾಮದಿಂದ ದಾವಾಸ್ತಿಯು ಇರುವ ಸ್ಥಳಕ್ಕೆ 6 ಕಿ. ಮೀ ಅಂತರ ವಿರುತ್ತದೆ. ನನ್ನ ತಾತ ಪುಟ್ಟೇಗೌಡ ರವರು 2007 ರಲ್ಲಿ ತೀರಿಕೊಂಡಿರಬಹುದು. ಇವತ್ತಿಗೆ ಅಂದಾಜು 19 ವರ್ಷಗಳು ಆಗಿರುತ್ತವೆ. ನನ್ನ ತಾತ ಪುಟ್ಟೇಗೌಡ ರವರು ತೀರಿಕೊಂಡ ನಂತರ ನನ್ನ ಮಾವಂದಿರಾದ ಪ್ರತಿವಾದಿ 2 ರಿಂದ 4 ರವರು ಅವರವರ ಹೆಂಡತಿ ಮಕ್ಕಳುಗಳ ಜೊತೆ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2 ನಿಂಗೇಗೌಡ ಪ್ರತಿವಾದಿ 3 ಬೋರೇಗೌಡ ರವರು ಟೆರಸ್ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿ 4 ಶಿವಣ್ಣ ರವರು ಹೆಂಚಿನ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾತನವರು ಇದ್ದಾಗಲೇ ಹೆಂಚಿನ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ಅಜ್ಜಿ ಬೀರಮ್ಮ ಅಂದರೆ ನನ್ನ ತಾತ ಪುಟ್ಟೇಗೌಡರ 2 ನೇ ಹೆಂಡತಿ ರವರು ತೀರಿಕೊಂಡು 4 ವರ್ಷಗಳು ಆಗಿರುತ್ತದೆ. ನನ್ನ ತಾತ ಪುಟ್ಟೇಗೌಡರು ತೀರಿಕೊಂಡ ನಂತರ ಅವರು ಇದ್ದ ಮನೆ ಈಗ ಖಾಲಿ ಇರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯ ದಾವಾಸ್ತಿಯಲ್ಲೆ ತೋರಿಸಲಾಗಿರುತ್ತದೆ. ಸದರಿ ಪುಟ್ಟೇಗೌಡರಿಗೆ ಕೆಂಪಮ್ಮ ಎಂಬುವವರು ಮೊದಲನೇ ಮಗಳಾಗಿರುತ್ತಾರೆ ಎಂದರೆ ಸರಿ. ಸದರಿ ಕೆಂಪಮ್ಮ ಮತ್ತು ನನ್ನ ತಾಯಿ ಸಾಕಮ್ಮ ನವರು ಸಂಬಂಧ ಅಷ್ಟು ಚೆನ್ನಾಗಿ ಇರುವುದಿಲ್ಲ. ನನ್ನ ತಾಯಿ ಸಾಕಮ್ಮ ನವರು ನನ್ನ ತಾತನಿಗೆ 3 ನೇ ಮಗಳಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ ವಾದಿ ಸಾಕಮ್ಮರವರು ಏನು ಕೆಲಸವನ್ನು

ಮಾಡಿಕೊಂಡಿರುವುದಿಲ್ಲ. ನನ್ನ ತಾಯಿಯವರು ಈಗಲೂ ಸಹ ವ್ಯವಸಾಯ, ಹೈನುಗಾರಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ 3 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಒಂದು ನಿಂಗೇಗೌಡರ ಮನೆಯಾಗಿರುತ್ತದೆ ಮತ್ತೊಂದು ಬೋರೇಗೌಡರ ಮನೆಯಾಗಿರುತ್ತದೆ ಇನ್ನೊಂದು ಶಿವಣ್ಣನವರ ಮನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಅದುದ್ದರಿಂದ 3 ಪೋಟೋಗಳನ್ನು ನಿಡಿ 1 ರಿಂದ 3 ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಪ್ರತಿವಾದಿ 2 ರಿಂದ 4 ರವರುಗಳು ಅವರಿಗೆ ಕೊಟ್ಟಂತಹ ಜಮೀನುಗಳನ್ನು ಪ್ರತ್ಯೇಕವಾಗಿ ಭಾಗ ಮಾಡಿಕೊಂಡು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾತನವರ ಆಸ್ತಿಯಲ್ಲಿ ಉಳುಮೆ ಮಾಡಿಕೊಂಡು ಹೋಗುತ್ತಿರುತ್ತಾರೆಯೇ ಹೊರತು, ಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ ಖಂಡಿಕೆ 3 ರಲ್ಲಿ ಹೇಳಿರುವಂತೆ ಪ್ರತಿವಾದಿಗಳು ಮಾಂಸದ ಕೋಳಿ ಸಾಕಣಿಕೆ ಮಾಡಲು ಶೆಡ್ಡನ್ನು, ಮಣ್ಣಿನ ಇಟ್ಟಿಗೆ ತಯಾರು ಮಾಡುವ ಶೆಡ್ಡನ್ನು ನಿರ್ಮಿಸಿರುತ್ತಾರೆ ಎಂದು ತಿಳಿಸಿದ್ದು ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ದಾವಾಪತ್ರದಲ್ಲಿ ಪ್ರತಿವಾದಿ ಕೋಳಿ ಸಾಕಣಿಕೆ ಶೆಡ್ಡನ್ನು ಮತ್ತು ಇಟ್ಟಿಗೆ ತಯಾರಿಸುವ ಶೆಡ್ಡನ್ನು ಪ್ರತಿವಾದಿಗಳು ನಿರ್ಮಿಸಿರುತ್ತಾರೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ತಾಯಿಯವರಿಗೆ ಆರೋಗ್ಯ ಸರಿ ಇರುವುದಿಲ್ಲ ಎಂದು ತೋರಿಸಲು ದಾಖಲಾತಿ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಯವರು ಈಗಲೂ ಸಹ ಆರೋಗ್ಯದಿಂದ ಇದ್ದು, ದನಗಳನ್ನು ಅವರೇ ಕಟ್ಟಿ ಹಾಕುತ್ತಾರೆ, ಮನೆ ಕೆಲಸಗಳನ್ನು ಅವರೇ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ತಿಳಿದುಬರುತ್ತದೆ ಎಂದು ನಾನು ಅವರ ಜಿ ಪಿ ಎ ಯನ್ನು ತೆಗೆದುಕೊಂಡು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ತಾಯಿಯವರ ಮದುವೆಯ ಸಮಯದಲ್ಲಿ ಅವರಿಗೆ ತವರು ಮನೆಯಿಂದ ಏನೇನನ್ನು ನೀಡಲಾಗಿತ್ತು ಎಂದು ತಿಳಿದಿರುತ್ತೀರಾ ಎಂದರೆ ಸಾಕ್ಷಿಯು ನಾನು ತಿಳಿದಿರುತ್ತೇನೆ ಎಂದು ನುಡಿಯುತ್ತಾರೆ. ಮದುವೆಯ ಸಮಯದಲ್ಲಿ ನನ್ನ ತಾತನವರು ನನ್ನ ತಾಯಿಯವರಿಗೆ ಏನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನನ್ನ ತಂದೆಯವರೇ ನನ್ನ ತಾಯಿಯನ್ನು ಮದುವೆ ಮಾಡಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರ ಊರಾದ ಜೊಲ್ಲೆಯ್ಯನ ಗುಡ್ಲು ಒಂದು ಕುಗ್ರಾಮವಾಗಿತ್ತು ಅಲ್ಲಿ ವಿದ್ಯುತ್‌ಚಕ್ತಿ ಸಂಪರ್ಕ ಇತ್ತೀಚೆಗೆ ಬಂದಿರುತ್ತದೆ ಎಂದರೆ ಸಾಕ್ಷಿಯು 20 ವರ್ಷದಿಂದ ವಿದ್ಯುತ್ ಚಕ್ತಿ ಸಂಪರ್ಕ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಯವರನ್ನು ಮದುವೆ ಮಾಡಿಕೊಡುವ ಸಮಯದಲ್ಲಿ 11 ½ ತೊಲ (ಒಂದು ತೊಲಕ್ಕೆ 10 ಗ್ರಾಂ)ಬಂಗಾರ ಮತ್ತು ರೂ.25,000/-ಗಳನ್ನು ಕೊಟ್ಟು ಮದುವೆ ಮಾಡಿಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾಯಿಯವರು ಮದುವೆಯಾಗಿ ಸುಮಾರು 45 ವರ್ಷಗಳು ಆಗಿರುತ್ತೆವೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ 2 ರಿಂದ 4 ರವರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ